# ಪತ್ರಿಕಾ ತುಣುಕುಗಳು
# PAPER CLIPPINGS

8

ಇಲಾಖೆ / ವಿಷಯ : DEPARTMENT / SUBJECT: [illegible] (A)

ಪತ್ರಿಕೆಯ ಹೆಸರು : NAME OF THE NEWS PAPER: ಉದಯವಾಣಿ　　ದಿನಾಂಕ : DATE : 07/09/2020

## ಹರಿಪಾದ ಸೇರಿದ ಎಡನೀರು ಶ್ರೀ

ಉವಾ 7/9/20

**ಕಾಸರಗೋಡು:** ತೋಟಕಾಚಾರ್ಯ ಪರಂಪರೆಯ ಎಡನೀರು ಮಠಾಧೀಶ ಶ್ರೀ ಕೇಶವಾನಂದ ಭಾರತೀ ಶ್ರೀಪಾದರು (79) ಶನಿವಾರ ಹರಿಪಾದ ಸೇರಿದರು. ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಜಗತ್ತಿಗೆ ಮಾರ್ಗದರ್ಶಿ ಯಾಗಿದ್ದ ಶ್ರೀಗಳು ಮಹಾ ಕಲಾ ತಪಸ್ವಿಯೂ



ಆಗಿದ್ದರು. ಸೆ. 2ರಂದು ಚಾತುರ್ಮಾಸ ವ್ರತವನ್ನು ಪೂರೈಸಿದ ಎಡನೀರು ಮಠಾಧೀಶರು ಕೇರಳದ ಏಕೈಕ ಹಾಗೂ ಪ್ರಸಿದ್ಧ ಶ್ರೀ ಶಂಕರ ಪೀಠಾಧಿಪತಿಗಳಾಗಿದ್ದಾರೆ. ತೋಟಕಾಚಾರ್ಯ ಪರಂಪರೆಯ ಯತಿ ಶ್ರೇಷ್ಠರಾಗಿ ಧಾರ್ಮಿಕ, ಕಲೆ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರಗಳ ಪುನರುತ್ಥಾನದಲ್ಲಿ ವೈವಿಧ್ಯಪೂರ್ಣ ಕೊಡುಗೆಗಳ ಮೂಲಕ ಗಣನೀಯ ಸಾಧನೆಗೈದಿದ್ದಾರೆ.

▶ ವಿಶೇಷ ಲೇಖನ ಹಾಗೂ ವಿವರ: 6

## ಹರಿಪಾದ ಸೇರಿದ ಎಡನೀರು ಶ್ರೀ

ಉವಾ 7/9/20

**ಕಾಸರಗೋಡು:** ತೋಟಕಾಚಾರ್ಯ ಪರಂಪರೆಯ ಎಡನೀರು ಮಠಾಧೀಶ ಶ್ರೀ ಕೇಶವಾನಂದ ಭಾರತೀ ಶ್ರೀಪಾದರು (79) ಶನಿವಾರ ತಡರಾತ್ರಿ 12.45ಕ್ಕೆ ಎಡನೀರು ಮಠದಲ್ಲಿ ಹರಿಪಾದ ಸೇರಿದರು. ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಜಗತ್ತಿಗೆ ಮಾರ್ಗದರ್ಶಿಯಾಗಿದ್ದ ಶ್ರೀಗಳು ಮಹಾ ಕಲಾ ತಪಸ್ವಿಯೂ ಆಗಿದ್ದರು.



ಸೆ.2ರಂದು ಚಾತುರ್ಮಾಸ್ಯ ವ್ರತವನ್ನು ಪೂರೈಸಿದ ಶ್ರೀಮತ್ ಎಡನೀರು ಮಠಾಧೀಶರು ಕೇರಳದ ಏಕೈಕ ಹಾಗೂ ಪ್ರಸಿದ್ಧ ಶ್ರೀ ಶಂಕರ ಪೀಠಾಧಿಪತಿಗಳಾಗಿದ್ದು ತೋಟಕಾಚಾರ್ಯ ಪರಂಪರೆಯ ಯತಿ ಶ್ರೇಷ್ಠರಾಗಿ ಧಾರ್ಮಿಕ, ಕಲೆ, ಸಾಂಸ್ಕೃತಿಕ, ಸಾಮಾಜಿಕ ಕ್ಷೇತ್ರಗಳ ಪುನರುತ್ಥಾನದಲ್ಲಿ ವೈವಿಧ್ಯಪೂರ್ಣ ಹಾಗೂ ಮಹತ್ವದ ಕೊಡುಗೆಗಳ ಮೂಲಕ ಗಮನೀಯ ಹಾಗೂ ಗಣನೀಯ ಸಾಧನೆಗೈದಿದ್ದಾರೆ.

ಶ್ವಾಸಕೋಶ ಸಂಬಂಧ ಅನಾರೋಗ್ಯದಿಂದ ಕಳೆದ ಕೆಲವು ದಿನಗಳಿಂದ ಯತಿಗಳು ಚಿಕಿತ್ಸೆಯಲ್ಲಿದ್ದರು. ಸೆ.2ರಂದು ಪ್ರಸ್ತುತ ಸಾಲಿನ ತಮ್ಮ 60ನೇ ಚಾತುರ್ಮಾಸ್ಯ ವ್ರತಾಚರಣೆಯನ್ನು ಮಠದಲ್ಲಿ ಯಶಸ್ವಿಯಾಗಿ ಪೂರೈಸಿದ್ದರು. ಬಾಲ್ಯದಲ್ಲೇ ಯತಿ ದೀಕ್ಷೆ ಪಡೆದ ಅವರು ಉಡುಪಿ ಪೇಜಾವರ ಶ್ರೀಗಳನ್ನು ಹೊರತುಪಡಿಸಿದರೆ ಅತೀ ಹೆಚ್ಚು ಚಾತುರ್ಮಾಸ್ಯ ವ್ರತವನ್ನು ಕೈಗೊಂಡವರು.

14ನೇ ವಯಸ್ಸಿನಲ್ಲಿ ಶ್ರೀ ಈಶ್ವರಾನಂದ ಭಾರತೀ ಶ್ರೀಗಳಿಂದ ಸನ್ಯಾಸತ್ವ ಪಡೆದಿದ್ದರು. ವಿಶೇಷವೆಂಬಂತೆ ಭಾರತದ ಸಂವಿಧಾನದ ಮೂಲ ಆಶಯಗಳಿಗೆ ಸಂಬಂಧಿಸಿದ ಮಹತ್ತರವಾದ ನೂತನ ತಿದ್ದುಪಡಿಗೆ ಕಾರಣವಾದ ಶ್ರೀ ಕೇಶವಾನಂದ ಭಾರತೀ ಆ್ಯಕ್ಟ್ ಜಾರಿಗೆ ಬರುವಲ್ಲಿ ಸ್ವಾಮೀಜಿಗಳ ಅಳಿಸಲಾಗದ ಕೊಡುಗೆ ಮಹತ್ತರವಾಗಿದೆ.

ದೇಶದ ಕಾನೂನು ಇತಿಹಾಸದಲ್ಲಿಯೇ ಶ್ರೀ ಕೇಶವಾನಂದ ಭಾರತೀ ಸ್ವಾಮೀಜಿ ಅವರು ಸರಕಾರದ ವಿರುದ್ಧ ಸುಪ್ರೀಂಕೋರ್ಟ್‌ನಲ್ಲಿ ಸಲ್ಲಿಸಿದ್ದ ದೂರು ಹಾಗೂ ಭೂ ಒಡೆತನದ ಹಕ್ಕಿಗೆ ಸಂಬಂಧಿಸಿದ ಅರ್ಜಿಯು ದೇಶದ ಕಾನೂನು ಮತ್ತು ಸಂಸತ್ತು ಮಂಡನೆಗಳಿಗೆ ಹೊಸ ಭಾಷ್ಯವನ್ನು ಬರೆದಿತ್ತು. ಇಂದಿಗೂ ಆ ದೂರಿನ ಆಲಾಪನೆ, ಪರಾಮರ್ಶೆ, ಕಾನೂನು ಹಾಗೂ ಸಂಸತ್ತಿನ ಮೂಲಕ ತಿದ್ದುಪಡಿ ನಿಯಮಗಳ ಬಗೆಗಿನ ಅಧ್ಯಾಯ ಇತ್ಯಾದಿ ಕಾನೂನು ವಿದ್ಯಾರ್ಥಿಗಳಿಗೂ ಪಾಠವಾಗಿ ಉಲ್ಲೇಖವಿದೆ.

**ಕಲಾಪ್ರೇಮಿ ಸ್ವಾಮೀಜಿ:** ಪರಮಪೂಜ್ಯರಾದ ಎಡನೀರು ಸ್ವಾಮೀಜಿಯವರು ಕಲಾವಿದರ ಬಗ್ಗೆ ವಿಶೇಷ ಗೌರವ, ಪ್ರೀತಿ ಹೊಂದಿದ್ದರು. ಸ್ವತಃ ಸಂಗೀತ ಮತ್ತು ಭಾಗವತಿಕೆಯ ಕಲಾವಿದರಾಗಿ, ಎಡನೀರು ಶ್ರೀ ಗೋಪಾಲಕೃಷ್ಣ ಯಕ್ಷಗಾನ ಮೇಳವನ್ನು ಸಮರ್ಥವಾಗಿ ಮುನ್ನಡೆಸಿದ್ದರು. ಸಾಹಿತ್ಯ, ಸಾಂಸ್ಕೃತಿಕ ಸಮ್ಮೇಳನ, ಯಕ್ಷಗಾನ, ಭರತನಾಟ್ಯ, ಸಂಗೀತಾದಿ ಕಾರ್ಯಕ್ರಮಗಳನ್ನು ಮಾಡಿಸಿ ಕಲಾವಿದರಿಗೆ ಪ್ರೋತ್ಸಾಹ ನೀಡುತ್ತಿದ್ದರು.

ಕಾಸರಗೋಡಿನಲ್ಲಿ ದಿನದಿಂದ ದಿನಕ್ಕೆ ಕನ್ನಡದ ಅಸ್ತಿತ್ವ ಕಳೆದುಕೊಳ್ಳುತ್ತಿರುವ ಸಂದರ್ಭದಲ್ಲಿ ಕನ್ನಡ ಭಾಷೆಗೆ ಅನ್ಯಾಯವಾದಾಗಲೆಲ್ಲ ಶ್ರೀಗಳು ಧ್ವನಿಯೆತ್ತಿದ್ದರು.

**ಗಣ್ಯರ ಸಂತಾಪ:** ಉಪರಾಷ್ಟ್ರಪತಿ ವೆಂಕಯ್ಯ ನಾಯ್ಡು, ಸಂಸದೆ ಶೋಭಾ ಕರಂದ್ಲಾಜೆ, ಕೊಂಡೆವೂರು ಮಠದ ಶ್ರೀ ಯೋಗಾನಂದ ಸರಸತಿ ಸ್ವಾಮೀಜಿ, ಒಡಿಯೂರು, ಮಾಣಿಲ ಶ್ರೀಗಳು ಮೊದಲಾದವರು ಟ್ವೀಟ್ ಮಾಡಿ ತೀವ್ರ ಸಂತಾಪ ಸೂಚಿಸಿದ್ದಾರೆ.

**ಅಂತ್ಯೇಷ್ಟಿ:** ಹರಿಪಾದ ಸೇರಿದ ಶ್ರೀ ಕೇಶವಾನಂದ ಭಾರತೀ ಶ್ರೀಗಳ ಅಂತ್ಯ ವಿಧಿಗಳು ಮಠದ ಉತ್ತರ ಭಾಗದಲ್ಲಿರುವ ಬೃಂದಾವನದಲ್ಲಿ ಭಾನುವಾರ ಅಪರಾಹ್ನ ನಡೆಯಿತು. ಮಠದ ಈ ಹಿಂದಿನ ಯತಿವರೇಣ್ಯರ ಸಮಾಧಿಗಳ ಪಕ್ಕದಲ್ಲಿ ಶ್ರೀಗಳ ನಿರ್ಯಾಣ ಮಾಡಲಾಯಿತು. ವೇದ ವಿದ್ವಜ್ಜನರು ನೇತೃತ್ವ ವಹಿಸಿದ್ದರು.

**ಧಾರ್ಮಿಕ, ಆಧ್ಯಾತ್ಮಿಕ, ಸಾಮಾಜಿಕ, ಸಾಂಸ್ಕೃತಿಕ ಜಗತ್ತಿಗೆ ಮಾರ್ಗದರ್ಶಿಯಾಗಿದ್ದ ಶ್ರೀಗಳು**

### ಸೆ. 28ರಂದು ನೂತನ ಯತಿ ಪೀಠಾರೋಹಣ

ಶ್ರೀಗಳು ಸೆ.2ರಂದು ತಮ್ಮ 60ನೇ ಚಾತುರ್ಮಾಸ್ಯ ವ್ರತಾನುಷ್ಠಾನವನ್ನು ಯಶಸ್ವಿಯಾಗಿ ಪೂರೈಸಿದ್ದರು. ಈ ವೇಳೆಯೇ ವಯೋಸಹಜವಾಗಿ ಅಲ್ಪ ನಿತ್ರಾಣರಾಗಿ ಕಂಡುಬಂದಿದ್ದ ಅವರು ಉತ್ತರಾಧಿಕಾರಿಯಾಗಿ ತಮ್ಮ ಪೂರ್ವಾಶ್ರಮದ ಸಹೋದರಿ ಸರಸ್ವತಿ-ನಾರಾಯಣ ದಂಪತಿಯ ಸುಪುತ್ರ ಜಯರಾಮ ಮಂಜತ್ತಾಯ ಅವರನ್ನು ಹೆಸರಿಸಿದ್ದರು.



ಪ್ರಸ್ತುತ 50ರ ಹರೆಯದ ಜಯರಾಮ ಮಂಜತ್ತಾಯ ಅವರು ಕೇರಳ ಪಾರ್ತಿಸುಬ್ಬ ಯಕ್ಷಗಾನ ಕಲಾಪರಿಷತ್ತಿನ ಅಧ್ಯಕ್ಷರಾಗಿದ್ದವರು. ಪ್ರಸ್ತುತ ಸದಸ್ಯರಾಗಿದ್ದಾರೆ. ಮಠದ ಸಂಪೂರ್ಣ ಉಸ್ತುವಾರಿಯನ್ನು ಕಳೆದೊಂದು ದಶಕದಿಂದ ಸಮರ್ಥವಾಗಿ ನಿಭಾಯಿಸಿರುವ ಜಯರಾಮ ಅವರು ಎಲ್ಲ ಜಾತಿ, ಮತ, ಧರ್ಮ, ರಾಜಕೀಯ ಪಕ್ಷಗಳೊಂದಿಗೆ ಸಮಷ್ಟಿ ಭಾವದಲ್ಲಿ ಜನಾನುರಾಗಿಯಾಗಿದ್ದು, ಉನ್ನತ ವಲಯಗಳ ವರೆಗಿನ ಸಂಪರ್ಕ ಹೊಂದಿ ಸಜ್ಜನ ವ್ಯಕ್ತಿಯಾಗಿದ್ದಾರೆ. ಅಧಿಕೃತ ಘೋಷಣೆ ಮತ್ತು ಪೀಠಾರೋಹಣ ವಿಧಿವಿಧಾನಗಳು ಸೆ.28ರಂದು ನಡೆಯಲಿದೆ ಎಂದು ಮಠದ ಮೂಲಗಳು ತಿಳಿಸಿವೆ. ಭಾವೀ ಮಠಾಧೀಶರಿಗೆ ಶ್ರೀಸಚ್ಚಿದಾನಂದ ಭಾರತೀ ಎಂದು ಮಠದ ಅಧಿಕೃತರು ಅಭಿಧಾನಗೈದಿದ್ದಾರೆ.

**ಪೂಜ್ಯ ಕೇಶವಾನಂದ ಭಾರತೀ ಸ್ವಾಮೀಜಿ ಅವರು ಸಮುದಾಯದ ಸೇವೆಗಾಗಿ ಮತ್ತು ದೀನ ದಲಿತರನ್ನು ಸಶಕ್ತೀಕರಣಕ್ಕಾಗಿ ನೀಡಿದ ಕೊಡುಗೆ ಅಪಾರ ಹಾಗೂ ಅನನ್ಯ. ಭಾರತ ದೇಶದ ಸಂಸ್ಕೃತಿ ಮತ್ತು ಸಂವಿಧಾನದ ಕುರಿತು ಆಳವಾದ ಜ್ಞಾನವನ್ನು ಹೊಂದಿದ್ದ ಅವರು ಮುಂದಿನ ತಲೆಮಾರುಗಳಿಗೂ ಸ್ಫೂರ್ತಿಯಾಗಿ ಉಳಿಯುತ್ತಾರೆ. ಓಂ ಶಾಂತಿ.**

**• ನರೇಂದ್ರ ಮೋದಿ, ಪ್ರಧಾನಿ**